ಓ.ಎಸ್. – 145/2021

ಪಿ. ಡಬ್ಲೂ – 2

ಸಾಕ್ಷಿಯನ್ನು ದಿಃ 21.08.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಆರ್.ಎಂ.ಎಸ್ ರವರಿಂದಃ–**

ನಿಪಿ–4 ರಲ್ಲಿ ಚುಕ್ಕಿಗಳಿಂದ ಕಾಣಿಸಿರುವುದು ಏನು ಎಂದರೆ, ಅದು ದಾರಿಯಲ್ಲ. ನಮ್ಮ ಮಸೀದಿಯ ಅಧ್ಯಕ್ಷರ ಮನೆ. ಟಿಪ್ಪಣಿ ಪ್ರತಿಯಲ್ಲಿ ಸರ್ವೇ ನಂಬರ್ 135/4, ಸರ್ವೇ ನಂಬರ್ 135/6 ಮತ್ತು ಸರ್ವೇ ನಂಬರ್ 135/7 ರಲ್ಲಿ ದಾರಿಯನ್ನು ಕಾಣಿಸಿದ್ದಾರೆ ಎಂದರೆ, ಸಾಕ್ಷಿಯು ನಕಾಶೆ ಕಂಡ ರಸ್ತೆ ಯಾವುದೂ ಸ್ಥಳದಲ್ಲಿ ಇಲ್ಲ ಎನ್ನುತ್ತಾರೆ. ಸದರಿ ಸರ್ವೇ ನಂಬರ್ ಗಳಲ್ಲಿ ಬಂಡಿ ದಾರಿ ಇದ್ದರೂ ಸಹ ದಾರಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಲಂದೂರು ಗ್ರಾಮದ ಗ್ರಾಮ ನಕಾಶೆಯಲ್ಲಿ ಮಲಂದೂರು ಗ್ರಾಮದ ಸರ್ವೇ ನಂಬರ್ 135 ರಿಂದ ಶಿಕಾರಿಪುರ ರಸ್ತೆಯವರೆಗೆ ಬಂಡಿ ದಾರಿ ಇದೆ ಎಂದರೆ ನನಗೆ ಗೊತ್ತಿಲ್ಲ. ಟಿಪ್ಪಣಿಯಲ್ಲೂ ಸಹ ಸದರಿ ರಸ್ತೆ ಹಾದು ಹೋಗಿರುವ ಜಾಗದಲ್ಲಿ ಕರಾರು ಇದೆ ಎಂದು ಕಾಣಿಸಿದೆ ಎಂದರೆ ಸರಿಯಲ್ಲ.

ದಾಸಕೊಪ್ಪ ಗ್ರಾಮದಲ್ಲಿ ಹಳೇ ಮಸೀದಿಯು ಗ್ರಾಮ ಠಾಣಾ ಜಾಗದಲ್ಲಿ ಇತ್ತು ಎಂದರೆ ಸರಿಯಲ್ಲ. ಮುಂದುವರೆದು ಮಸೀದಿ ಮಲಂದೂರು ಗ್ರಾಮದ ಸರ್ವೇ ನಂಬರ್ 547 ರಲ್ಲಿ ಇತ್ತು ಎನ್ನುತ್ತಾರೆ. ಸರ್ವೇ ನಂಬರ್ 547 ರಲ್ಲಿ ಮಸೀದಿ ಇತ್ತು ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ ಮಸೀದಿಯು ಸರ್ವೇ ನಂಬರ್ 547 ರಲ್ಲಿ ನಮ್ಮ ಅಜ್ಜನ ಕಾಲದಿಂದಲೂ ಇತ್ತು. ಸದರಿ ಮಸೀದಿ ಕುರಿತು ಸರ್ಕಾರದಿಂದ ನೀಡಿದ ಹಕ್ಕು ಪತ್ರ ಅಥವಾ ಮಂಜೂರಾತಿ ಪತ್ರ ನಮ್ಮ ಬಳಿ ಇಲ್ಲ. ಹೊಸ ಮಸೀದಿಯನ್ನು ಯಾವ ವರ್ಷದಲ್ಲಿ ಕಟ್ಟಿದ್ದಾರೆ ಎಂದು ಈಗ ನನಗೆ ನೆನಪಿಲ್ಲ. ಹೊಸ ಮಸೀದಿಯನ್ನು ಕಟ್ಟುವಾಗ ಹಳೇ ಮಸೀದಿ ಇದ್ದ ಜಾಗದ ಹಿಂಭಾಗಕ್ಕೆ ಸ್ಥಳಾಂತರಿಸಿ ಕಟ್ಟಿದ್ದೇವೆ ಎಂದರೆ ಸರಿ. ಮಸೀದಿಯನ್ನು ಸ್ಥಳಾಂತರಿಸಿ ಕಟ್ಟುವ ಸಮಯದಲ್ಲಿ ಸಂಬಂಧಪಟ್ಟವರಿಂದ ಪರವಾನಗಿ, ನಕ್ಷೆ ಮತ್ತು ಅಭಿಯಂತರರಿಂದ ನೀಲಿ ನಕ್ಷೆಯನ್ನು ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಮುಂದುವರೆದು ನೋಡಬೇಕು ಎನ್ನುತ್ತಾರೆ.

ನಿಪಿ–2 ರಲ್ಲಿ ಮಸೀದಿಗೆ ಸಂಬಂಧಪಟ್ಟಂತೆ 2012–13 ರಲ್ಲಿ ಅನುಭವದಂತೆ ವಿಸ್ತೀರ್ಣ ನಮೂದು ಮಾಡಿರುವುದಾಗಿ ಬರೆದಿದೆ ಎಂದರೆ ಇರಬಹುದು. ನಿಪಿ–5 ನಮ್ಮ ಹೊಸ ಮಸೀದಿಯ

ಫೋಟೋ ಎಂದರೆ ಸರಿ. ನಿಪಿ–6 ಹಳೇ ಮಸೀದಿಯ ಹಿಂಬದಿ ಗೋಡೆಯ ಫೋಟೋ ಎಂದರೆ ಸರಿ. ಹಳೇ ಮಸೀದಿ ಗೋಡೆಯ ಹಿಂಬದಿಯಲ್ಲಿ ರಸ್ತೆ ಇರುವುದಾಗಿ ನಿಪಿ–6 ರಲ್ಲಿ ಕಾಣುತ್ತಿದೆ ಎಂದರೆ ಸರಿ. ನಿಪಿ–7 ರಲ್ಲಿ ಕಾಣುತ್ತಿರುವ ಮನೆ ನಮ್ಮ ಮಸೀದಿಯ ಗುರುಗಳಿಗೆ ಕಟ್ಟಿಕೊಟ್ಟಿರುವಂತಹ ಮನೆ. ಆ ಮನೆಯ ಮುಂದೆ ನಿಪಿ–7 ರಲ್ಲಿ ರಸ್ತೆ ಕಾಣುತ್ತಿದೆ ಎಂದರೆ ಸರಿ. ಮುಂದುವರೆದು ಅದು ಮಸೀದಿಗೆ ಹೋಗುವ ದಾರಿ ಎನ್ನುತ್ತಾರೆ. ನಿಪಿ–7 ರಲ್ಲಿ ಕಾಣುವ ಹಳೇಯ ಗೋಡೆಯ ನಂತರ ಪ್ರತಿವಾದಿಯ ಜಮೀನು ಇದ್ದು, ಗೋಡೆಯ ನಂತರ ನಮ್ಮ ಜಾಗ ಇಲ್ಲ ಎಂದರೆ ಸರಿ. ನಿಪಿ–8 ರಲ್ಲಿ ಬೈಕ್ ಮತ್ತು ಶೆಡ್ ಇರುವ ಜಾಗವೇ ಪ್ರತಿವಾದಿಯ ಜಮೀನಿಗೆ ಹೋಗುವ ದಾರಿ ಎಂದರೆ ಸರಿಯಲ್ಲ.

ನಿಪಿ–9 ಮತ್ತು 10 ರಲ್ಲಿ ಕಾಣುವ ಬಾವಿಯನ್ನು ಪ್ರತಿವಾದಿಯರು ಸರ್ವೇ ನಂಬರ್ 135/4 ರಲ್ಲಿ ತಮ್ಮ ಉಪಯೋಗಕ್ಕಾಗಿ ತೆಗೆಸಿಕೊಂಡಿರುವ ಬಾವಿ ಎಂದರೆ ಸರಿಯಲ್ಲ. ನಿಪಿ–12 ರಲ್ಲಿ ಆಟೋ ನಿಂತಿರುವ ಜಾಗವು ಹಳೆಯ ಮಸೀದಿಯ ಎದುರಿಗೆ ಇರುವ ಜಾಗವಾಗಿದ್ದು, ಅದನ್ನು ಅಲ್ಲಿರುವ ಮೂರು ಮನೆಗಳಿಗೆ ಹೋಗಲು ಬಿಟ್ಟುಕೊಂಡಿರುವ ಕಾಲುದಾರಿ ಎನ್ನುತ್ತಾರೆ. ಇಮ್ತಿಯಾಜ್ ಮತ್ತು ಮುಜೀಬ್ ರವರ ಮನೆಗಳ ನಂತರವೇ ಪ್ರತಿವಾದಿಯರ ಜಾಗ ಇದೆ ಎಂದರೆ, ಸಾಕ್ಷಿಯು ಕಾಂಪೌಂಡ್ ನ ನಂತರ ಅವರ ಜಾಗ ಇದೆ ಎನ್ನುತ್ತಾರೆ.

ದಿನಾಂಕ 30.08.2021 ರಂದು ಪ್ರತಿವಾದಿಯರು ಸಲ್ಲಿಸಿದ ಅರ್ಜಿಯ ಅನುಸಾರ ಸಾಗರದ ತಹಶೀಲ್ದಾರ್ ರವರು ಒತ್ತುವರಿ ಮಾಡಿ ರಸ್ತೆಯಲ್ಲಿ ನಿರ್ಮಿಸಿರುವ ಶೆಡ್ ಅನ್ನು ತೆರವುಗೊಳಿಸಬೇಕು ಎಂದು ನಮಗೆ ನಿರ್ದೇಶನ ನೀಡಿದ್ದರು ಎಂದರೆ ಸರಿಯಲ್ಲ. ದಿನಾಂಕ 19.04.2021 ರಂದು ಗ್ರಾಮ ಠಾಣಾ ವ್ಯಾಪ್ತಿಯಲ್ಲಿರುವ ಒತ್ತುವರಿ ದಾರಿಯನ್ನು ತೆರವುಗೊಳಿಸಬೇಕು ಎಂದು ಗ್ರಾಮ ಪಂಚಾಯತಿಯವರಿಗೆ ತಹಶೀಲ್ದಾರ್ ರವರು ನಿರ್ದೇಶನ ನೀಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನಿಗೆ ಹೋಗಲು ರಸ್ತೆಯ ಕುರಿತು ನಕ್ಷೆ ತಯಾರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಹೊಸ ಮಸೀದಿಯ ಹಿಂಭಾಗದಲ್ಲಿ ಕೆಲವು ನಿವೇಶನಗಳನ್ನು ನಾವು ಮಾಡಿದ್ದು, ಆ ನಿವೇಶನಗಳು ಯಾವ ಸರ್ವೇ ನಂಬರ್ ನಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ. ಮುಂದುವರೆದು ನಾವು ಯಾವುದೇ ನಿವೇಶನಗಳಿಗಾಗಿ ಜಾಗವನ್ನು ಗುರುತು ಮಾಡಿಲ್ಲ ಹಾಗೂ ಯಾವುದೇ ನಿವೇಶನಗಳನ್ನು ನಾವು ಮಾಡಿಲ್ಲ. ಮಸೀದಿ ಕಮಿಟಿಯವರು ಭೂ ಪರಿವರ್ತನೆ ಮಾಡಿಸಿ ಅನುಮೋದನೆ ಪಡೆಯದೆ ಕಾನೂನು ಬಾಹಿರವಾಗಿ ನಿವೇಶನಗಳನ್ನು ಸರ್ವೇ ನಂಬರ್ 135/5 ರಲ್ಲಿ ರಚಿಸಿದ್ದೇವೆ ಎಂದು

ಗೌರಮ್ಮ ಎನ್ನುವವರು ನಮ್ಮ ವಿರುದ್ಧ ಸರ್ಕಾರದ ವಿವಿಧ ಇಲಾಖೆಗಳಿಗೆ ಅರ್ಜಿ ಬರೆದಿದ್ದಾರೆ ಎಂದರೆ, ಸಾಕ್ಷಿಯು ಅದು ನಮಗೆ ಸಂಬಂಧಪಟ್ಟಿದ್ದಲ್ಲ ಎನ್ನುತ್ತಾರೆ. ರಸೂಲ್ ಸಾಬ್ ರವರು ಸದರಿ ಸರ್ವೇ ನಂಬರ್ 135/5 ರಲ್ಲಿ ನಿವೇಶಗಳನ್ನು ರಚಿಸಿ ನಮ್ಮ ಮಸೀದಿಗೆ ವಹಿಸಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ನಕಾಶೆ ಕಂಡ ಬಂಡಿ ದಾರಿಯನ್ನು ನಾವು ಮುಚ್ಚಿದ ಕಾರಣ ಪ್ರತಿವಾದಿಯರಿಗೆ ಓಡಾಡಲು ರಸ್ತೆ ಇಲ್ಲದಂತಾಗಿದೆ ಎನ್ನುವುದು ಸರಿಯಲ್ಲ.

ನಮ್ಮ ಭಾರತ ದೇಶದಲ್ಲಿ ಯಾವುದೇ ಒಂದು ಜಾತಿ, ಸಮುದಾಯ, ಧರ್ಮ ಹಾಗೂ ಕೋಮಿಗೆ ಸಂಬಂಧಪಟ್ಟಂತೆ ಒಂದು ರಸ್ತೆಯನ್ನು ಉಪಯೋಗಿಸಲು ನೀಡುವುದಿಲ್ಲ ಎಂದರೆ ಸರಿ. ಮಸೀದಿಗೆ ಹೋಗುವ ರಸ್ತೆಯಲ್ಲಿ ಸಾರ್ವಜನಿಕರು ಓಡಾಡಿದರೆ ನಾವು ಪ್ರಾರ್ಥನೆ ಮಾಡುವಾಗ ನಮಗೆ ತೊಂದರೆಯಾಗುತ್ತದೆ ಎನ್ನುತ್ತಾರೆ. ನಾವು ರಸ್ತೆಯ ಮೇಲೆ ಪ್ರಾರ್ಥನೆ ಮಾಡುವುದಿಲ್ಲ ಎಂದರೆ ಸರಿ. ಮುಂದುವರೆದು ನಮ್ಮ ಮಸೀದಿಗೆ ಹೋಗಲು ದಾರಿ ಮಾಡಿಕೊಂಡಿದ್ದೇವೆ ಎನ್ನುತ್ತಾರೆ. ಮಲಂದೂರು ಗ್ರಾಮದ ಸರ್ವೇ ನಂಬರ್ 135/4 ಮತ್ತು ಸರ್ವೇ ನಂಬರ್ 135/5 ಮೂಲತಃ ಯಾರಿಗೆ ಸೇರಿದ ಜಮೀನುಗಳು ಎಂದು ನನಗೆ ಗೊತ್ತಿಲ್ಲ.

ಸೈಯದ್ ರಫೀಕ್, ಸೈಯದ್ ಮುಜೀಬುಲ್ಲಾ ಹಾಗೂ ನಾವು ಒಂದೇ ಕುಟುಂಬದ ಸದಸ್ಯರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದ ಕಾರಣ ಸರ್ವೇ ನಂಬರ್ 135/4 ರ ಜಮೀನಿನ ಮೇಲೆ ನಮ್ಮ ತಕರಾರು ಇದೆ. ಸೈಯದ್ ಖಲೀಂವುಲ್ಲಾ ನನಗೆ ಮಾವನ ಮಗನಾಗಬೇಕು. ಸದರಿ ಸೈಯದ್ ಖಲೀಂವುಲ್ಲಾ ರವರು ತನ್ನ ಹಿಸ್ಸೆಯ ಜಾಗವನ್ನು ಪ್ರಾರ್ಥನಾ ಶಾಲೆಯ ಅಧ್ಯಕ್ಷರಾದ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲದ ಹಾಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಧರ್ಮದವರ ಜಮೀನನ್ನು ಬೇರೆ ಧರ್ಮದವರು ಖರೀದಿ ಮಾಡಿದ್ದಾರೆ ಎಂದು ನಾವು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ನನ್ನ ಮಾವನ ಮಗ. ಪ್ರಾರ್ಥನಾ ಶಾಲೆಗೆ ನಾವು ದಾರಿ ಬಿಡುವುದಿಲ್ಲ ಎಂದು ತಕರಾರು ಮಾಡಿದಾಗ ಪಂಚಾಯತಿಯಲ್ಲಿ ಹಾಗೆ ಮಾಡುವುದು ಕಾನೂನು ಬಾಹಿರ ಎಂದು 2 ನೇ ಪ್ರತಿವಾದಿ ಹೇಳಿದ್ದರಿಂದ ಅವನನ್ನು ಸಹ ಈ ದಾವೆಯಲ್ಲಿ ಪಾರ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಒ ಎಸ್ 51/2023, 52/2023, 53/2023 ರ ದಾವೆಗಳನ್ನು ಆ ದಾವೆಯ ಪ್ರತಿವಾದಿಗಳ ವಿರುದ್ಧ ರಸ್ತೆಯ ಕುರಿತು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. 2018 ರಲ್ಲಿ ಪ್ರಾರ್ಥನಾ ಶಾಲೆಗೆ ಓಡಾಡುವ ರಸ್ತೆ ಕುರಿತು ಆನಂದಪುರ ಗ್ರಾಮ ಪಂಚಾಯತಿಯಲ್ಲಿ ಸಾಮಾಜಿಕ ಸಮಿತಿ ಸಭೆ ಕರೆದು

ರಸ್ತೆಯ ಬಗ್ಗೆ ಠರಾವು ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನಾವು ಕಾನೂನು ಬಾಹಿರವಾಗಿ ಮುಚ್ಚಿರುವ ರಸ್ತೆಯನ್ನು ತೆರವುಗೊಳಿಸಬೇಕು ಹಾಗೂ ನಕಾಶೆ ಕಂಡ ದಾರಿಯನ್ನು ಬಿಟ್ಟುಕೊಡಬೇಕು ಎಂದು ಸದರಿ ಠರಾವಿನಲ್ಲಿ ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 135/4 ದ ಸರ್ವೇ ನಂಬರ್ 135/5, ಸರ್ವೇ ನಂಬರ್ 135/7 ರ ಜಮೀನುಗಳಿಗೆ ಓಡಾಡುವ ರಸ್ತೆಯ ಮೇಲೆ ನಮಗೆ ಓಡಾಡುವ ಅಧಿಕಾರ ಇಲ್ಲದೇ ಇದ್ದರೂ ಆ ರಸ್ತೆಯನ್ನು ನಾವು ಮುಚ್ಚಿದ್ದೇವೆ ಎನ್ನುವುದು ಸರಿಯಲ್ಲ. ಮುಂದುವರೆದದ ಅಲ್ಲಿ ಯಾವುದೇ ರಸ್ತೆ ಇಲ್ಲ ಎನ್ನುತ್ತಾರೆ.

2021 ರಲ್ಲಿ ತಹಶೀಲ್ದಾರ್ ರವರು ಕಾನೂನು ಬಾಹಿರವಾಗಿ ಮುಚ್ಚಿರುವ ರಸ್ತೆಯನ್ನು ತೆರವುಗೊಳಿಸುವಂತೆ ನಮಗೆ ನಿರ್ದೇಶನ ನೀಡಿದ್ದರಿಂದ ಅವರ ಕಾರ್ಯಕ್ಕೆ ಅಡ್ಡಿಪಡಿಸಲು ಈ ತರಹದ ಸುಳ್ಳು ದಾವೆಗಳನ್ನು ದಾಖಲು ಮಾಡುತ್ತಾ ಬಂದಿದ್ದೇನೆ ಎನ್ನುವುದು ಸರಿಯಲ್ಲ. ಸರ್ವೇ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ನಕಾಶೆ ಕಂಡ ರಸ್ತೆಯನ್ನು ತೋರಿಸಿದರೆ ನಾವು ಆ ರಸ್ತೆಯನ್ನು ಮುಚ್ಚಿದ್ದರೆ ಅದನ್ನು ಬಿಟ್ಟುಕೊಡಬೇಕು ಎಂದರೆ ಸರಿ. ನಮ್ಮ ಸಮುದಾಯದ ಜಾಗವನ್ನು ಪ್ರತಿವಾದಿಯು ಖರೀದಿ ಮಾಡಿದ್ದು, ಅವರು ನಮ್ಮ ಧರ್ಮದವರಲ್ಲದ ಕಾರಣ ಅವರಿಗೆ ತಮ್ಮ ಜಮೀನಿಗೆ ಹೋಗಲು ನಾವು ದಾರಿಯನ್ನು ಬಿಡುತ್ತಿಲ್ಲ ಎನ್ನುವುದು ಸರಿಯಲ್ಲ. ನಕಾಶೆ ಕಂಡ ರಸ್ತೆಗಳನ್ನು ಮುಚ್ಚುವ ಯಾವುದೇ ಅಧಿಕಾರ ನಮಗೆ ಇಲ್ಲದೇ ಇದ್ದರೂ ಸಹ ನಾವು ಕಾನೂನುಬಾಹಿರವಾಗಿ ಪ್ರತಿವಾದಿಯ ಜಮೀನುಗಳಿಗೆ ಹೋಗುವ ರಸ್ತೆಯನ್ನು ಮುಚ್ಚಿದ್ದೇವೆ ಎನ್ನುವುದು ಸರಿಯಲ್ಲ.

ಸರ್ವೇ ನಂಬರ್ 135/4 ದ ಸರ್ವೇ ನಂಬರ್ 135/5, ಸರ್ವೇ ನಂಬರ್ 135/7 ರ ಜಮೀನುಗಳಿಗೆ ಹೋಗಲು ಪ್ರತ್ಯೇಕ ರಸ್ತೆ ಇರುವ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಏಕೆಂದರೆ ನಮ್ಮ ಮಸೀದಿಯ ಸುತ್ತಲೂ ಕಾಂಪೌಂಡ್ ಇರುವುದರಿಂದ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.